International Journal of Kannada Research 2018; 4(1): 86-87

International Journal of Kannada Research
www.kannadajournal.com

**ISSN: 2454–5813**
IJKR 2018; 4(1): 86-87
© 2018 IJKR
www.kannadajournal.com
Received: 18-11-2017
Accepted: 19-12-2017

**ಶ್ರೀನಿವಾಸ ದೊಡ್ಡಮನಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೫೮೦೦೦೩

**Correspondence**
**ಶ್ರೀನಿವಾಸ ದೊಡ್ಡಮನಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೫೮೦೦೦೩

# ಹಾವೇರಿ ಜಿಲ್ಲೆಯ ಶಾಸನೋಕ್ತ ಗ್ರಾಮದೇವತೆ

**ಶ್ರೀನಿವಾಸ ದೊಡ್ಡಮನಿ**

ಕರ್ನಾಟಕದಲ್ಲಿ ಶಾಸನ ಸಂಪತ್ತು ಶ್ರೀಮಂತವಾಗಿದೆ. ಈ ಶಾಸನಗಳು ಸಾಮಾಜಿಕ, ರಾಜಕೀಯ, ಧಾರ್ಮಿಕ ಪರಂಪರೆಯ ಮೇಲೆ ಹೆಚ್ಚು ಪ್ರಭಾವದ ಮುದ್ರೆಯನ್ನೊತ್ತಿವೆ. ರಾಜಮಹಾರಾಜರ ಇತಿಹಾಸವಷ್ಟೇ ಅಲ್ಲ ದೇಶೀಯ ನಾಯಕರ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಇದಕ್ಕಿಂತಲೂ ಪ್ರಮುಖವಾದದು ಎಂದರೆ ಈ ನಾಡಿನ ಧಾರ್ಮಿಕ ಇತಿಹಾಸದ ಬಗೆಗಿನ ವಿಷಯವೆಂದೆ ಹೇಳಬೇಕು. ಏಕೆಂದರೆ ಶಾಸನಗಳಲ್ಲಿ ಧರ್ಮಸಮನ್ವಯತೆಯನ್ನು ಹೇಳುವಂತೆ, ಧರ್ಮ ಸಂಘರ್ಷದ ಬಗೆಗಿನ ಮಾಹಿತಿ ಕೋಶದಂತಿವೆ. ಆಯಾ ರಾಜರ ಕಾಲದ ಧರ್ಮಗಳು, ಧರ್ಮಪುರುಷರು, ಧರ್ಮದ ಸ್ಥಾಪನಾಚಾರ್ಯರು ಮೊದಲಾದವುಗಳ ಕುರಿತು ಶಾಸನಗಳು ತಿಳಿಸುತ್ತವೆ. ಅದರಲ್ಲೂ ತೀರ್ಥಂಕರರು, ಶಿವ, ಬ್ರಹ್ಮನಂತ ಪುರುಷ ದೇವತೆಗಳ ಪಾಲು ಹೆಚ್ಚು. ಇದಕ್ಕೆ ರಾಜಧರ್ಮ ಮತ್ತು ಪ್ರಬಲ ಧರ್ಮಗಳ ಪ್ರಭಾವವೇ ಹೆಚ್ಚಾಗಿರುತ್ತದೆ. ಆದರೆ ಕೆಲವೇ ಕೆಲವು ಶಾಸನಗಳಲ್ಲಿ ಗ್ರಾಮದೇವತೆಗಳ ಉಲ್ಲೇಖಗಳು ಅಲ್ಲಲ್ಲಿ ಕಂಡುಬರುತ್ತವೆ. ಅಂತಹ ಅಪರೂಪದ ಶಾಸನಗಳು ಹಾವೇರಿ ಜಿಲ್ಲೆಯಲ್ಲಿ ಕಂಡುಬರುವುದು ಒಂದು ವಿಶೇಷವೆನಿಸುತ್ತದೆ.

ಹಾವೇರಿ ಜಿಲ್ಲೆಯ ಸಿಗ್ಗಾಂವಿ, ಬ್ಯಾಡಗಿ, ಹಿರೇಕೆರೂರು ತಾಲೂಕಿನ ಶಾಸನಗಳಲ್ಲಿ ಆಯಾ ಊರಿನ ಗ್ರಾಮದೇವತೆಗಳಾದ ಮಾರಬ್ಬೆ, ಚಂಡೇಶ್ವರ ದೇವಿ, ಭಳರಿದೇವತೆ, ಮಲ್ಲವ್ವೆಯಬಸದಿ, ದೇವತೆ ಎಂಬ ಹೆಸರನಲ್ಲಿ ಉಲ್ಲೇಖವಾಗಿವೆ. ಭಳರಿದೇವತೆ ಮತ್ತು ಮಲ್ಲವ್ವೆಯ ಬಸದಿಯನ್ನೊರತುಪಡಿಸಿ ಉಳಿದ ದೇವತೆಗಳನ್ನು ಮಾರಿದೇವತೆಗಳೆನ್ನುತ್ತಾರೆ. ಇಂದಿಗೂ ಈ ದೇವತೆಗಳ ಹಬ್ಬವನ್ನು ಮಾರಿಹಬ್ಬವೆಂದು, ಗ್ರಾಮದೇವತೆಯ ಜಾತ್ರೆಗಳು ಎಂದು ಗುರುತಿಸುತ್ತ ಬಂದಿವೆ. ಪ್ರತಿ ಊರಿಗೂ ಒಂದು ಗ್ರಾಮದೇವತೆ ಇದ್ದು ಅದರಲ್ಲಿ ದುರ್ಗಾದೇವಿ, ಮಾರಮ್ಮ ಮತ್ತು ಚೌಡೇಶ್ವರಿ ದೇವತೆಗಳ ದೇವಾಲಯಗಳೇ ಹೆಚ್ಚಾಗಿವೆ. ಈ ಗ್ರಾಮದೇವತೆಗಳ ಉಲ್ಲೇಖಗಳು ಶಾಸನಗಳಲ್ಲಿ ದಾಖಲಾಗಿರುವುದು ಕಡಿಮೆಯೇ. ಅಪರೂಪವೆಂಬಂತೆ ಅಲ್ಲಿಲ್ಲಿ ದಾಖಲೆಗಳು ಕಣ್ಣಿಗೆ ಬೀಳುತ್ತವೆ. ಹೀಗೆ ಶಾಸನೋಕ್ತವಾಗಿರುವ ಗ್ರಾಮದೇವತೆಗಳ ಕುರಿತಾದ ಅಧ್ಯಯನದ ಅವಶ್ಯಕತೆಯೂ ಇದೆ. ಈ ಜಿಲ್ಲೆಯಲ್ಲಿ ಕಂಡುಬರುವ ಗ್ರಾಮದೇತೆಗಳಿಗೆ ದಾನ ನೀಡುವ ಪದ್ಧತಿಯು ಕ್ರಿ.ಶ.ಸು ೮ನೆಯ ಶತಮಾನದಿಂದ ಆರಂಭವಾಯಿತು ಎಂಬುದು ಶಾಸನದಿಂದ ತಿಳಿದುಬರುತ್ತದೆ. ಹಾಗಾಗಿ ಜಿಲ್ಲೆಯಲ್ಲಿ ಕ್ರಿ.ಶ. ಎಂಟನೆಯ ಶತಮಾನಕ್ಕೆ ಶಾಸನಗಳಲ್ಲಿ ಸ್ಥಾನಪಡೆದವು ಎಂಬುದನ್ನು ತಿಳಿಯಬಹುದು. ಆದರೆ ಈ ಪದ್ಧತಿಯು ಕ್ರಿ.ಶ.ಸು ೮ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಗ್ರಾಮದೇತೆಗಳ ಮೂರ್ತಿಸ್ಥಾಪನಾ ಕಾರ್ಯವು ನಡೆದಿರಲೂಬಹುದು. ಅದನ್ನು ಶೋಧಮಾಡುವ ಅವಶ್ಯಕತೆ ಇದೆ.

ಅಲ್ಲದೇ ಈ ಗ್ರಾಮದೇವತೆಗಳ ಹೆಸರಿನ ಹಿಂದೆ ಆಯಾ ಊರಿನ ಹೆಸರುಗಳು ಸೇರಿಕೊಂಡಿರುವುದನ್ನು ಗಮನಿಸಿದರೆ, ಆ ಗ್ರಾಮನಾಮದಲ್ಲಿ ಈ ದೇವತೆಗಳನ್ನು ಆರಾಧಿಸುವ ಪ್ರತ್ಯೇಕವಾದ ವರ್ಗವೊಂದಿತ್ತೆಂಬುದನ್ನು ತಿಳಿಯಬಹುದು. ಈ ಜಿಲ್ಲೆಯ ಶಾಸನಗಳಲ್ಲಿ ಪುಲ್ಲಂಗೂರಬ್ಬೆ (ಹುಲೂರು ಶಾಸನ), ಕಚ್ಚವಿ ಮಾರಬ್ಬೆ(ಕಚವಿ ಶಾಸನ), ಕೆರೂರ ಚಂಡೇಶ್ವರ ದೇವಿ(ಬೆಟಕೂರು ಶಾಸನ), ಚಿನ್ನಿಕಟ್ಟಿದೇವಿ (ಚಿನ್ನಿಕಟ್ಟಿ ಶಾಸನ) ಎಂದು ಉಲ್ಲೇಖವಾಗಿದ್ದರೆ, ಕೆಲವು ಶಾಸನಗಳಲ್ಲಿ ಕೇವಲ ಆ ದೇವತೆಯ ಹೆಸರನ್ನು ಮಾತ್ರ ಉಲ್ಲೇಖಿಸಿದೆ. ಇದಕ್ಕೆ ಚಿಕ್ಕೇರೂರಿನ ಶಾಸನವು ಸಾಕ್ಷಿಯಾಗುತ್ತದೆ. ಈ ಶಾಸನವು ಭಳರಿದೇವತೆ ಎಂದಷ್ಟೇ ಹೇಳಿದೆ. ಆದರೆ ಆವೂರಿನ ಹೆಸರನ್ನು ಪೂರ್ವಪ್ರತ್ಯಯದಂತೆ ಹಚ್ಚಿಕೊಳ್ಳುವುದಿಲ್ಲ. ಇಲ್ಲಿ ಬರುವ ಅಬ್ಬೆ ಎಂಬ ಪದವು ಅವ್ವೆ ಎಂದಾಗುವುದರಿಂದ ಪಲ್ಲಂಗೂರವ್ವೆ, ಕಚವಿ ಮಾರವ್ವೆ, ಚಂಡೇಶ್ವರದೇವಿಯು ಚೌಡೇಶ್ವರಿದೇವಿ ಎಂದಾಗುತ್ತದೆ. ಪುರಾಣ ಕಾವ್ಯಗಳಲ್ಲಿ ಶಿವನ ಸತಿ ಪಾರ್ವತಿಯನ್ನು ಆದಿಶಕ್ತಿ, ದುರ್ಗಾಶಕ್ತಿ, ಪರಾಶಕ್ತಿ ಎಂದು ಗುರುತಿಸಲಾಗಿದೆ.

ಅವಳೇ ದುರ್ಗೆಯಾಗಿ ಬಂದವಳೆಂಬ ಪ್ರತೀತಿಯಿರುವುದರಿಂದ ಅವಳನ್ನೇ ಗ್ರಾಮದೇವಿಯೆಂದು ಭಾವಿಸಿ ಆರಾಧಿಸುವ ಭಕ್ತಸಮೂಹವೊಂದು ಹುಟ್ಟಿಕೊಂಡಿದೆ. ಅಂತಹ ಭಕ್ತರಿಂದ ಗ್ರಾಮದೇವತೆಗಳ ಮೂರ್ತಿಪ್ರತಿಷ್ಠಾಪನೆಯಾಗಿರಬೇಕು. ಇಲ್ಲವೇ ಶಿವನಂತೆಯೇ ಪಾರ್ವತಿಗೂ ಸಮಾನ ಗೌರವ ಸಲ್ಲಿಸುವ ಸಲುವಾಗಿ ಈ ರೀತಿಯಾಗಿ ಪುರಾಣ ಕಾವ್ಯಗಳ ನಾಯಕಿಯಾಗಿ ಬಿಂಬಿಸಿರಬೇಕು. ಕಾವ್ಯಗಳಂತೆ ಪ್ರಾಚೀನ ಕಾಲದ ಶಾಸನಗಳಲ್ಲಿ ಈ ಮಾತೆಯ ದೇವಾಲಯಗಳನ್ನು ನಿರ್ಮಿಸಿ, ಅದಕ್ಕೆ ಸ್ಥಳೀಯ ಅರಸರು, ಮಂಡಳಿಕರು, ಆವೂರಿನ ಭಕ್ತರು ಭೂದಾನ, ಸುಂಕದಾನ, ತುಪ್ಪದೆರೆದಾನ, ಉಂಬಳಿ ಬಿಟ್ಟಿರುವುದನ್ನು ಈ ಶಾಸನಗಳು ತಿಳಿಸುತ್ತವೆ. ಮಲ್ಲವ್ವೆಬಸದಿ ಎಂಬುದೊಂದು ಮೇದೂರು ಗ್ರಾಮದಲ್ಲಿದ್ದು ಅದಕ್ಕೆ ದಾನ ನೀಡಿರುವುದು ತಿಳಿದುಬರುತ್ತದೆ. ಅಂತಹ ಏಳು ಶಾಸನಗಳು ಈ ಜಿಲ್ಲೆಯಲ್ಲಿರುವುದನ್ನು ಗಮನಿಸಬಹುದು. ಅವುಗಳು ಈ ಕೆಳಗಿನಂತಿವೆ.

ಹಿರೇಕೆರೂರು ತಾಲೂಕಿನ ಕಚವಿ ಗ್ರಾಮದ ಕ್ರಿ.ಶ, ೮ನೇ ಶತಮಾನದ ಶಾಸನವೊಂದು ರಾಷ್ಟ್ರಕೂಟರ ಧ್ರುವನ (ಕ್ರಿ.ಶ.೭೮೦–೭೯೩) ಆಳ್ವಿಕೆಯ ಕಾಲದಲ್ಲಿ ರಚನೆಯಾಗಿದ್ದು ಇದರಲ್ಲಿ ಬನವಾಸಿ–೧೨೦೦೦ ಆಳುತ್ತಿದ್ದ ಮುದೆನೂರಿನ ಮಾರನೆಂಬವನು ಕಚವಿಯ ಮಾರಬ್ಬೆಗೆ ತುಪ್ಪದೆರೆ ದಾನಮಾಡಿರುವುದನ್ನು ತಿಳಿಸುತ್ತದೆ[೧]. ಇಲ್ಲಿ ಬರುವ ಮಾರಬ್ಬೆ ಮಾರಮ್ಮದೇವಿಯಾಗಿರಬೇಕು.

ಸಿಗ್ಗಾಂವಿ ತಾಲೂಕಿನ ಹುಲಗೂರಿನ ಕ್ರಿ.ಶ್.೯೭೦ರ ಶಾಸನವು ರಾಷ್ಟ್ರಕೂಟರ ಖೊಟ್ಟಿಗನ(ಕ್ರಿ.ಶ್.೯೬೭–೯೭೨) ಕಾಲದ್ದಾಗಿದ್ದು ಗುತ್ತಿಯ ಗಂಗ ಅರಸನೆಂಬವನು ಪುಲಿಗೆರೆ–೩೦೦ನ್ನು ಆಳುವಾಗ ಆತನ ಹೆಂಡತಿ ಅಂಕರಸಿಯಳು ಪುಲ್ಲಂಗೂರಬ್ಬೆ ದೇವತೆಗೆ ಭೂಮಿದಾನ ಮತ್ತು ಸುಂಕದಾನ ಮಾಡಿದ್ದನ್ನು ಉಲ್ಲೇಕಿಸುತ್ತದೆ[೨]. ಆದರೆ ಯಾವ ದೇವತೆ ಎಂಬುದನ್ನು ಸ್ಪಷ್ಟವಾಗಿ ಹೇಳದೆ ಪುಲ್ಲಂಗೂರಬ್ಬೆ ಎಂದಿರುವುದರಿಂದ ಇವಳು ಆವೂರಿನ ಗ್ರಾಮದೇವಿಯೇ ಆಗಿರಬೇಕು.

ಹಿರೇಕೆರೂರು ತಾಲೂಕಿನ ಚಿಕ್ಕೇರೂರಿನ ಕ್ರ್ರ್.೯೫೫ರ ಶಾಸನವು ಭಳರಿದೇವತೆಯನ್ನು ಪಳ್ಳಿಗನಿಂದ ಪ್ರತಿಷ್ಠಾಪಿಸಲ್ಲಪಟ್ಟಿದ್ದನ್ನು ಉಲ್ಲೇಖಿಸುತ್ತದೆ[೩]. ಇಲ್ಲಿ 'ಪಳ್ಳಿಗ' ಎಂಬ ಪದ ಪ>ಹ ಕಾರವಾದರೆ ಹಳ್ಳಿಗ ಎಂದಾಗುತ್ತದೆ. ಈ ದೇವತೆಯನ್ನು ಪ್ರತಿಷ್ಠಾಪಿಸಿದ ಪಳ್ಳಿಗ ಯಾರು? ಎಂಬುದು ತಿಳಿಯುವುದಿಲ್ಲ. ಅಲ್ಲದೆ ಈ ಶಾಸನವು ಬನದಮ್ಮ ಎಂಬ ಗುಡಿಯ ಎದುರು ಸಿಕ್ಕಿದ್ದರಿಂದ ಬನದಮ್ಮನೇ ಭಳರಿದೇವಿಯಾಗಿರಬೇಕು. ಇದು ನಿಜವಾದಲ್ಲಿ ಚಿಕ್ಕೆರೂರಿನ ಇಂದಿನ ಬನಶಂಕರಿಯೇ ಭಳರಿ ದೇವತೆಯಾಗಿರಬೇಕು. ಏಕೆಂದರೆ ಬನಶಂಕರಿಯನ್ನು ಇಂದಿಗೂ ಬನದಮ್ಮ, ಬಂದಮ್ಮ, ಬನಶಂಕರಿ ಎಂದೆಲ್ಲಾ ಕರೆಯುವ ರೂಢಿ ಈ ಊರಲ್ಲಿದೆ.

ಹಿರೇಕೆರೂರಿನ ಕ್ರಿ.ಶ.೧೦೭೪ರ ಶಾಸನದಲ್ಲಿ ದೇವತೆಗೆ ಬಿಟ್ಟ ದಾನ ಎಂದಿದೆ[೪]. ಇದು ಎರಡನೆಯ ಸೋಮೇಶ್ವರನ ಕಾಲಕ್ಕೆ ರಚನೆಯಾಗಿದೆ. ಇಲ್ಲಿ ಯಾವ ದೇವತೆ ಎಂದು ನಿಖರವಾಗಿ ಹೇಳಿಲ್ಲ. ಆ ದೇವಿಯು ದುರ್ಗಾದೇವಿಯೇ ಇರಬೇಕು. ಈ ಶಾಸನವು ನೀರು ತುಂಬುವ ಹೊಂಡದ ಮೆಟ್ಟಿಲ ಮೇಲೆ ಸಿಕ್ಕಿರುವುದರಿಂದ ನೀರಿನ ಹೊಂಡವನ್ನು ನಿರ್ಮಿಸಿ ದಾನ ಮಾಡಿರಬಹುದೆಂದು ಊಹಿಸಬಹುದು.

ಅದೇ ತಾಲೂಕಿನ ಬೆಟಕೂರಿನ ಕ್ರಿ.ಶ.೧೨೫೦ ಶಾಸನವು ಮಹಾಪ್ರಧಾನ ಇಮ್ಮಡಿದೋರ ದಣ್ಣಾಯಕನಿಂದ ಕೆರೆವೂರ ಚಂಡೇಶ್ವರದೇವಿಗೆ ಭೂದಾನ ಎಂದಿದೆ[೫]. ಚಂಡೇಶ್ವರ ಎಂಬುದು ಪುರುಷವಾಚಿಯಂತಿದ್ದರು ಅದರ ಮುಂದಿರುವ ದೇವಿ ಎಂಬುದು ಸ್ತ್ರೀವಾಚಕವಾಗಿದೆ. ಹೀಗಾಗಿ ಇದು ಚೌಡೇಶ್ವರ ದೇವಿಯ ಗುಡಿಯಾಗಿರಬೇಕು. ಚೌಂಡೇಶ್ವರಿ ಎಂಬ ಪದವು ಚಂಡೇಶ್ವರ ಎಂದು ಸ್ಖಾಲಿತ್ಯದಿಂದ ಕೂಡಿದೆ ಎನಿಸುತ್ತದೆ. ಮೂಲಶಾಸನವನ್ನು ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತವೆನಿಸುತ್ತದೆ.

ಇದೇ ತಾಲೂಕಿನ ಮೇದೂರಿನ ೧೯೨ನೇ ನಂಬರಿನ ಶಾಸನವು ರಾಷ್ಟ್ರಕೂಟರ ಮೂರನೆಯ ಗೋವಿಂದನ ಕಾಲಕ್ಕೆ ಸಂಬಂಧಿಸಿದ್ದಾಗಿದ್ದು, ಇದರಲ್ಲಿ ಸಳುಕಿವಂಶದ ರಾಜಾದಿತ್ಯರಸನಿಂದ ಮಲ್ಲವ್ವೆಯ ಬಸದಿಗೆ ದಾನ ಮಾಡಿರುವುದನ್ನು ಉಲ್ಲೇಖಿಸಿದೆ[೬]. ಬಸದಿ ಎಂಬುದು ಜೈನರಿಗೆ ಸಂಬಂದಿಸಿದ್ದು. ಇಲ್ಲಿ ಮಲ್ಲವ್ವೆ ಎಂಬವಳು ಜೈನ ಯಕ್ಷಿಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಜೈನರ ದೇವತೆಯಾಗಿ ಪದ್ಮಾವತಿಯನ್ನು ಗುರುತಿಸಿರುವುದರಿಂದ ಮಲ್ಲವ್ವೆ ಎಂಬ ಜೈನಯಕ್ಷಿಯಿರುವ ಉಲ್ಲೇಖಗಳು ಕಂಡುಬರುವುದಿಲ್ಲ. ಇಲ್ಲವೆ ಸವದತ್ತಿಯ ಪದ್ಮಾವತಿ ದೇವಾಲಯವು ಎಲ್ಲಮ್ಮನ ದೇವಾಲಯವಾದಂತೆ ಇದು ಕೂಡ ಜೈನ ಯಕ್ಷಿಯ ಬಸದಿಯು ಮಲ್ಲವ್ವೆಯ ಬಸದಿಯಾಗಿರುವ ಸಾಧ್ಯತೆಯಿದೆ. ರಾಷ್ಟ್ರಕೂಟರು ಶೈವ ಮತ್ತು ವೈಷ್ಣವರ ಆರಾಧಕರಾಗಿದ್ದರು. ಹೀಗಾಗಿ ಸ್ಥಳೀಯ ದೇವತೆ ಎಂಬಂತೆ ಮಲ್ಲವ್ವೆಯನ್ನು ಗುರುತಿಸಿರುವ ಸಾಧ್ಯತೆಯಿದೆ. ಇದರ ಕುರಿತಾಗಿ ಹೆಚ್ಚು ಶೋಧ ನಡೆಯುವ ಅಗತ್ಯವಿದೆ.

ಬ್ಯಾಡಗಿ ತಾಲೂಕಿನ ಚಿನ್ನಿಕಟ್ಟಿಯ ಶಾ.ಸಂ. ೫೧ರಲ್ಲಿ 'ಚಿನ್ನಿಕಟ್ಟಿ ದೇವತೆಗೆ ಬಿಟ್ಟ ಉಂಬಳಿ' ಎಂದು ದಾಖಲಿಸಿದೆ. ಆ ದೇವತೆ ಯಾವುದು ಎಂದು ಸ್ಪಷ್ಟವಾಗುವುದಿಲ್ಲ.

ಹೀಗೆ ಹಾವೇರಿ ಜಿಲ್ಲೆಯ ಶಾಸನಗಳಲ್ಲಿ ಗ್ರಾಮದೇವತೆಗಳಾಗಿ ಮಾರವ್ವ, ಚೌಡವ್ವ, ಬನಶಂಕರಿ, ದುರ್ಗಾದೇವಿಯರ ಉಲ್ಲೇಖಗಳು ಕಂಡುಬರುತ್ತವೆ. ಹಾಗಾಗಿ ಶಾಸನೋಕ್ತವಾಗಿರುವ ಸ್ಥಳೀಯ ಗ್ರಾಮದೇವತೆಗಳು, ಆ ದೇವಾಲಯದ ನಿರ್ಮಾತೃಗಳು, ದಾನ ನೀಡಿದ ಪ್ರಮುಖ ಮತ್ತು ಸ್ಥಳೀಯ ಅರಸರು, ನಾಯಕರು ಮೊದಲಾದವರ ಕುರಿತಾಗಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾದ ಅಗತ್ಯತೆಯಿದೆ.

**ಅಡಿಟಿಪ್ಪಣಿ**


1. ಎಂ.ಎಂ.ಕಲಬುರ್ಗಿ, ಧಾರವಾಡ ಜಿಲ್ಲೆಯ ಶಾಸನಸೂಚಿ, ಕಚವಿ ಶಾಸನ, ಶಾ.ಸಂ–೫೭, ಪು–೭೨
2. ಪೂರ್ವೋಕ್ತ, ಹುಲಗೂರಿನ ಕ್ರಿ.ಶ್.೯೭೦ರ ಶಾಸನ, ಶಾ.ಸಂ–೧೬೫, ಪು–೩೨
3. ಪೂರ್ವೋಕ್ತ, ಚಿಕ್ಕೇರೂರಿನ ಕ್ರ್ರ್.೯೫೫ರ ಶಾಸನ, ಶಾ.ಸಂ–೯೮, ಪು–೭೩
4. ಪೂರ್ವೋಕ್ತ, ಹಿರೇಕೆರೂರಿನ ಕ್ರಿ.ಶ.೧೦೭೪ರ ಶಾಸನ, ಶಾ.ಸಂ–೨೯೨, ಪು–೭೯
5. ಪೂರ್ವೋಕ್ತ, ಬೆಟಕೂರಿನ ಕ್ರಿ.ಶ.೧೨೫೦ ಶಾಸನ, ಶಾ.ಸಂ–೧೭೨, ಪು–೭೬
6. ಪೂರ್ವೋಕ್ತ, ಮೇದೂರಿನ ೧೯೨ನೇ ನಂಬರಿನ ಶಾಸನ, ಶಾ.ಸಂ–೯೮, ಪು–೭೩